# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕಡೂರು

ಉಪಸ್ಥಿತರು: ಶ್ರೀಮತಿ ಸುಜಾತ ಸುವರ್ಣ ಬಿ. ಬಿ.ಕಾಂ.,ಎಲ್.ಎಲ್.ಬಿ;
ಹಿರಿಯ ಸಿವಿಲ್ ನ್ಯಾಯಾಧೀಶರು, ಕಡೂರು

ಅಸಲು ದಾವಾ
ನಂ. ೭೭-೨೦೨೦

ದಿನಾಂಕ: ೦೮ ನೇ ಸೆಪ್ಟಂಬರ್ ೨೦೨೧

ವಾದಿಯರು : ೧) ಶ್ರೀ. ಖಲೀಮ್ ಪಾಷ,
ಬಿನ್: ಟಿ.ಆರ್. ರೆಹಮಾನ್ ಸಾಬ್,
೪೩ ವರ್ಷ,
ವ್ಯವಸಾಯ,
ವಾಸಃ ೨ ನೇ ಹಂತ,
ರಾಜಾ ಮಜೀದ್,
ಆರ್.ಎಂ.ಎಲ್. ನಗರ,
ಶಿವಮೊಗ್ಗ ಟೌನ್.

(ವಾದಿಯ ಪರವಾಗಿ ಶ್ರೀ ಎಸ್.ಎನ್. ಗಿರೀಶ- ವಕೀಲರು )

- ವಿರುದ್ಧ –

ಪ್ರತಿವಾದಿಯರು : ೧. ಶ್ರೀಮತಿಃ ಎ. ವಾಸಂತಿ ರಾವ್,
ಕೊಂ: ಎ. ಮನೋಹರ್ ರಾವ್,
೭೮ ವರ್ಷ, ವಾಸಃ ಕಲ್ಪನ,
ಬಾಲಗಡಿ ರಸ್ತೆ, ಕೊಪ್ಪ ಟೌನ್,
ಚಿಕ್ಕಮಾಗಳೂರು ಜಿಲ್ಲೆ.

೨. ಕೆ.ಎಲ್ ಹರೀಶ್, ತಂದೆ ಕೆ.ಆರ್. ಲೋಕೇಶ್,
೩೭ ವರ್ಷ, ವ್ಯವಹಾರ,
ವಾಸಃ ಮನೆ ನಂ: ೩೮೦೧,
ಲಕ್ಷ್ಮೀನಗರ, ೩ ನೇ ಕ್ರಾಸ್,
ಕಡೂರು ಟೌನ್.

(ಪ್ರತಿವಾದಿ ೧ ಮತ್ತು ೨ ರವರ ಪರವಾಗಿ ಸಿ.ವಿ.ಎಸ್. - ವಕೀಲರು)

**ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ೩೯ ನಿಯಮ ೧ ಮತ್ತು ೨ ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ ೧ ರ ಮೇಲಿನ ಆದೇಶ**

ಅರ್ಜಿದಾರರು / ವಾದಿಯರು ಮಧ್ಯಂತರ ಅರ್ಜಿ ನಂ.೧ ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ೩೯ ನಿಯಮ ೧ ಮತ್ತು ೨ ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಎರಡನೇ ಪ್ರತಿವಾದಿಯರು, ಅವರ ವಾರಸುದಾರರು, ಪ್ರತಿನಿಧಿಯವರು, ಸೇವಕರು ಹಾಗೂ ಅವರ ಪರವಾಗಿ ಕೆಲಸ ಮಾಡುವ ಯಾವುದೇ ವ್ಯಕ್ತಿಗಳು ದಾವಾ ಶೆಡ್ಯೂಲ್ ಆಸ್ತಿಯನ್ನು ಈ ದಾವೆಯಲ್ಲಿ ಅಂತಿಮ ತೀರ್ಪು ಆಗುವವರೆಗೂ ಮಾರಾಟ ಮಾಡಬಾರದು ಮತ್ತು ಯಾವುದೇ ಋಣಭಾರ ಹೊರಿಸಬಾರದು ಎಂದು ಪ್ರತಿವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

೨. ಅರ್ಜಿದಾರರು ಮಧ್ಯಂತರ ಅರ್ಜಿ ೧ಕ್ಕೆ ಪೂರಕವಾಗಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.ಆ ಪ್ರಮಾಣ ಪತ್ರದ ಸಾರಾಂಶ ಈ ಕೆಳಗಿನಂತಿದೆ.

೧ ನೇ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕರಾಗಿದ್ದು ದಾವಾ ಆಸ್ತಿಯು ವಡೇರಹಳ್ಳಿ ಗ್ರಾಮದ, ಸರ್ವೆ ನಂ.೧೪/೨ಎ ವಿಸ್ತೀರ್ಣ ೩ ಎಕರೆ ೩೪ ಗುಂಟೆ, ವಡೇರಹಳ್ಳಿ ಗ್ರಾಮದ, ಸರ್ವೆ ನಂ. ೧೪/೨ಬಿ ವಿಸ್ತೀರ್ಣ ೩ ಎಕರೆ ೧೫ ಗುಂಟೆ ಮತ್ತು ವಡೇರಹಳ್ಳಿ ಗ್ರಾಮದ, ಸರ್ವೆ ನಂ. ೧೫/೫ ವಿಸ್ತೀರ್ಣ ೧೦ ಎಕರೆ ೨೮ ಗುಂಟೆ ಇರುತ್ತದೆ ಎಂದು ಹಾಗೂ ೧ ನೇ ಪ್ರತಿವಾದಿಯು ತನ್ನ ಹಣದ ಅವಶ್ಯಕತೆಗಾಗಿ ದಾವಾ ಆಸ್ತಿಗಳನ್ನು ಮಾರಾಟ ಮಾಡಲು ಇಚ್ಚಿಸಿದ್ದು, ಈ ವಿಚಾರವನ್ನು ತಿಳಿದ ಕೂಡಲೇ ವಾದಿಯು ಪ್ರತಿವಾದಿಯನ್ನು ಸಂಪರ್ಕಿಸಿ ದಾವಾ ಆಸ್ತಿಯನ್ನು ಖರೀದಿ ಮಾಡಲು ಇಚ್ಚೆ ವ್ಯಕ್ತಪಡಿಸಿರುತ್ತಾರೆ ಅದರಂತೆ ರೂ.೩,೪೫,೨೩,೨೫೦-೦೦ ಗಳಿಗೆ ಆಸ್ತಿಯನ್ನು ಮಾರಾಟ ಮಾಡಲು ಇಚ್ಚಿಸಿದ್ದು ಪ್ರತಿವಾದಿಯು ರೂ.೫,೦೦,೦೦೦-೦೦ ಗಳ ಕ್ರಯದ ಮುಂಗಡ ಹಣವನ್ನು ನಗದಾಗಿ ಪಡೆದುಕೊಂಡಿದ್ದು ದಿನಾಂಕ ೨೧-೦೧-೨೦೧೯ ರಂದು ಕ್ರಯದ

ಕರಾರು ಬರೆದುಕೊಟ್ಟಿದ್ದು ಆ ಕರಾರಿನಲ್ಲಿ ಹಣಪಡೆದ ವಿಚಾರ ನಮೂದು ಮಾಡಿರುತ್ತಾರೆ.

೩.ಉಳಿದ ಕ್ರಯದ ಹಣವಾದ ರೂ .೨೯,೨೩,೨೫೦-೦೦ ಗಳನ್ನು ದಿನಾಂಕ ೦೨-೦೨-೨೦೧೯ ರಿಂದ ೬ ತಿಂಗಳ ಒಳಗಾಗಿ ಪಾವತಿಸಲು ಒಪ್ಪಿ ಕರಾರು ಆಗಿರುತ್ತದೆ ಹಾಗೂ ಕ್ರಯದ ಕರಾರು ಮಾಡುವಾಗ ೧ ನೇ ಪ್ರತಿವಾದಿಯ ಜಾಗದ ಮಾಲೀಕತ್ವದ ಕುರಿತು ದಾಖಲಾತಿ ಮತ್ತು ವಂಶವೃಕ್ಷವನ್ನು ಕೂಡ ನೀಡಿರುತ್ತಾರೆ. ದಾವಾ ಆಸ್ತಿಯು ಎಸ್.ಸಿ., ಎಸ್.ಟಿ. ಪರಬಾರೆ ನಿಷೇದದ ಜಮೀನು ಆಗಿರುವುದಿಲ್ಲ. ಪಕ್ಷಗಾರರು ಸರ್ವೆ ಸ್ಕೆಚ್ ನೀಡಿದ ನಂತರ ಅಳತೆ ಮಾಡಿ ತಯೂರು ಮಾಡಿಕೊಡಲು ಮತ್ತು ಸ್ವಾಧೀನ ಕೊಡಲು ಒಪ್ಪಿಕೊಂಡಿರುತ್ತಾರೆ ಮತ್ತು ಪ್ರತಿವಾದಿಯವರು ದಿನಾಂಕ ೨೧-೦೧-೨೦೧೯ ರಂದು ಕ್ರಯ ಪತ್ರವನ್ನು ಬರೆದುಕೊಡಲು ಒಪ್ಪಿಕೊಂಡಿರುತ್ತಾರೆ.

೪. ವಾದಿಯು ಯಾವತ್ತು ಕೂಡ ದಾವಾ ಆಸ್ತಿಯನ್ನು ಖರೀದಿ ಮಾಡಲು ಸಿದ್ದ ಮತ್ತು ಬದ್ದರಾಗಿರುತ್ತಾರೆ. ೬ ತಿಂಗಳೊಳಗೆ ವಾದಿ ಹಲವಾರು ಬಾರಿ ಖರೀದಿ ಪತ್ರ ಬರೆದುಕೊಡುವಂತೆ ಕೇಳಿದರು ಕೂಡ ಪ್ರತಿವಾದಿ ಒಂದಲ್ಲ ಒಂದು ಕಾರಣದಿಂದ ಮುಂದೂಡುತ್ತ ಬಂದಿದ್ದಾರೆ. ವಾದಿಯು ಉಳಿಕೆ ರೂ.೩,೪೦,೨೩,೨೫೦-೦೦ ಗಳನ್ನು ಪಡೆದು ಕ್ರಯ ಪತ್ರವನ್ನು ಒಂದನೇ ಪ್ರತಿವಾದಿಯವರಿಂದ ನೊಂದಣಿ ಮಾಡಿಕೊಡುವಂತೆ ಕೋರಿಕೊಂಡಿದ್ದರು ಸಹ ಪ್ರತಿವಾದಿ ಒಂದಲ್ಲ ಒಂದು ಕಾರಣದಿಂದ ಮುಂದೂಡುತ್ತ ಬಂದಿದ್ದಾರೆ. ಪ್ರತಿವಾದಿಯ ವಿದ್ಯಾವಂತರಾಗಿದ್ದು ಅವರಿಗೆ ಎಲ್ಲಾ ರೀತಿಯ ಉಪಾಯಗಳು ಗೊತ್ತಿರುತ್ತದೆ. ದಿನಾಂಕ ೬-೨-೨೦೧೯ ರಂದು ವಾದಿಯು ೧ ನೇ ಪ್ರತಿವಾದಿಗೆ ಕರೆಮಾಡಿ ನೊಂದಣಿಗೆ ಅವಶ್ಯವಿರುವ ದಾಖಲಾತಿಗಳನ್ನು ನೀಡಿ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡುವಂತೆ ಕೇಳಿಕೊಂಡಿದ್ದರು ಸಹ ವಾದಿಯು ಸರಿಯಾಗಿ ಪ್ರತಿಕ್ರಯಿಸಿರುವುದಿಲ್ಲ.

೫. ಕ್ರಯದ ಕರಾರು ಪತ್ರವಾದ ದಿನದಿಂದಲೂ ವಾದಿಯು ಕ್ರಯ ಪತ್ರವನ್ನು ನೊಂದಣಿಮಾಡಿಸಿಕೊಳ್ಳಲು ಸಿದ್ದರು ಮತ್ತು ಬದ್ದರಾಗಿರುತ್ತಾರೆ ಹಾಗೂ ಕ್ರಯಪತ್ರದ ನೊಂದಣಿ ವೆಚ್ಚ ಮತ್ತು ಕ್ರಯದ ಬಾಬ್ತು ಉಳಿದ ಹಣವಾದ ರೂ.೩,೪೦,೨೩,೨೫೦-೦೦ ಪ್ರತಿವಾದಿಗೆ ಪಾವತಿಸಲು ಸಿದ್ದರಿರುತ್ತಾರೆ. ಆದರೆ ಪ್ರತಿವಾದಿಯು ತನ್ನ ಮಾತನ್ನು ಉಳಿಸಿಕೊಳ್ಳದೆ ದಾವ ಸ್ವತ್ತುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸದೆ ಕ್ರಯ ಕರಾರಿನ ಷರತ್ತುಗಳನ್ನು ಪಾಲಿಸಿರುವುದಿಲ್ಲ. ಒಂದನೇ ಪ್ರತಿವಾದಿಯ ದಾವಾ ಸ್ವತ್ತಿನ ನೊಂದಾವಣೆಗೆ ಅವಶ್ಯಕತೆ ಇದ್ದಂತಹ ದಾಖಲಾತಿಗಳನ್ನು ಒದಗಿಸದೆ ದಿನಾಂಕ ೧೨-೨-೨೦೧೯ ನೋಟಿಸ್ ನೀಡಿದ್ದು ಅದಕ್ಕೆ ವಾದಿಯು ದಿನಾಂಕ ೪-೩-೨೦೧೯ ಪ್ರತ್ಯುತ್ತರ ನೀಡಿರುತ್ತಾರೆ.

೬.ವಾದಿಯು ದಿನಾಂಕ ೨-೨-೨೦೧೯ ರಿಂದಲೂ ೧ ನೇ ಪ್ರತಿವಾದಿ ಕ್ರಯ ಪತ್ರದ ನೊಂದಾವಣೆಗೆ ಅವಶ್ಯಕವಾದಂತಹ ದಾಖಲಾತಿಗಳನ್ನು ಕೊಡುತ್ತಾರೆಂದು ಕಾಯುತ್ತಾ ಇದ್ದು ಹಾಗೂ ಅವರು ಆಸ್ತಿಯನ್ನು ನೊಂದಾವಣೆ ಮಾಮಾಡಿಕೊಳ್ಳಲು ತಯಾರಿದ್ದು ದಿನಾಂಕಃ ೧೦-೨-೨೦೧೯ ರಂದು ೧ ನೇ ಪ್ರತಿವಾದಿಯವರನ್ನು ಕ್ರಯಪತ್ರ ನೊಂದಣಿಗೆ ಅವಶ್ಯಕವಿರುವ ದಾಖಲೆಗಳನ್ನು ಒದಗಿಸುವಂತೆ ಕೇಳಿಕೊಂಡಿರುತ್ತಾರೆ ಮತ್ತು ಕ್ರಯ ಪತ್ರ ನೊಂದಣಿ ಮಾಡಿಕೊಳ್ಳಲು ಸಿದ್ದ ಮತ್ತು ಬದ್ದರಾಗಿರುತ್ತಾರೆ ಆದರೆ ಪ್ರತಿವಾದಿಯು ಸ್ಪಂದಿಸಿರುವುದಿಲ್ಲ.

೭. ವಾದಿಯು ದಾವಾ ಸ್ವತ್ತುಗಳ ಋಣಭಾರದ ದೃಢಿಕೃತ ನಕಲನ್ನು ದಿನಾಂಕ ೨೯-೧-೨೦೨೦ ರಂದು ತೆಗೆದು ನೋಡಿದಾಗ ೧ ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಹರೀಶ ಕೆ.ಎಲ್. ರವರಿಗೆ ದಿನಾಂಕ ೧೩-೧-೨೦೨೦ ರಂದು ಮಾರಾಟ ಮಾಡಿರುವುದು ಕಂಡುಬರುತ್ತದೆ. ತದನಂತರ ವಾದಿಯು ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಸದರಿ ಕ್ರಯಪತ್ರದ ದೃಢಿಕೃತ ನಕಲನ್ನು ಪಡೆದುಕೊಂಡು ನೋಡಿದಾಗ ಅದರಲ್ಲಿ ದಿನಾಂಕ ೧೩-೧-೨೦೨೦ ರಂದು ಎಸ್.ಆರ್. ಸಂಖ್ಯೆ ಕೆಡಿಆರ್-೧-೦೬೧೭೯/೨೦೧೯-೨೦೨೦ ರಂತೆ ಕಾನೂನು ಬಾಹಿರವಾಗಿ ಕ್ರಯ

ಪತ್ರ ನೊಂದಣಿ ಆಗಿರುವುದು ಕಂಡುಬರುತ್ತದೆ. ೧ ನೇ ಪ್ರತಿವಾದಿಯು ಕಾನೂನು ಬಾಹಿರವಾಗಿ ೨ ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ೧ ನೇ ಪ್ರತಿವಾದಿಗೆ ಸೇರಿದ ದಾವಾ ಆಸ್ತಿಯನ್ನು ೨ ನೇ ಪ್ರತಿವಾದಿಗೆ ಮಾರಾಟ ಮಾಡುವ ಯಾವುದೇ ಹಕ್ಕು ಇರುವುದಿಲ್ಲ. ಆದ್ದರಿಂದ ೨ ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ನ್ಯಾಯಾಲಯದಲ್ಲಿ ತೀರ್ಮಾನ ಆಗುವವರೆಗೆ ಯಾವುದೇ ರೀತಿಯ ಮಾರಾಟ ಮಾಡದಂತೆ ತಡೆಯಾಜ್ಞೆ ನೀಡಬೇಕೆಂದು ಕೋರಿರುತ್ತಾರೆ.

೮. ೨ ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ತನ್ನ ಪ್ರತಿವಾದ ಪತ್ರದಲ್ಲಿ ೧ ನೇ ಪ್ರತಿವಾದಿ ಮತ್ತು ವಾದಿಯವರ ನಡುವೆ ಒಪ್ಪಂದ ಕರಾರು ಆಗಿದ್ದು ಸದರಿ ಕರಾರಿನಂತೆ ವಾದಿಯು ನಡೆದುಕೊಳ್ಳದೇ ಮತ್ತು ಪ್ರತಿಫಲದ ಹಣವನ್ನು ಒಪ್ಪಂದ ಕರಾರಿನಂತೆ ರೂ.೫೦ ಲಕ್ಷ ಹಣವನ್ನು ಷರತ್ತಿನೊಳಗೆ ನೀಡಬೇಕಾಗಿದ್ದು ಆದರೆ ಒಂದನೇ ಪ್ರತಿವಾದಿಯು ಹಲವಾರು ಬಾರಿ ಕೇಳಿದರೂ ಕೂಡ ವಾದಿಯು ಹಣವನ್ನು ಪಾವತಿಸಿರುವುದಿಲ್ಲ ಹಾಗೂ ಅವಧಿ ಮುಗಿದರು ಕೂಡ ಅವರು ಕ್ರಯ ಪತ್ರ ನೊಂದಣಿ ಮಾಡಿಕೊಟ್ಟರುವುದಿಲ್ಲ. ೧ನೇ ಪ್ರತಿವಾದಿ ಕಾನೂನು ಬದ್ದವಾಗಿ ದಿನಾಂಕ ೧೨-೧೨-೨೦೧೯ ರಂದು ತಿಳುವಳಿಕೆ ಪತ್ರವನ್ನು ಒಪ್ಪಂದ ಕರಾರು ಖುಲಾಸೆ ಮಾಡಿಕೊಡುವಂತೆ ತಿಳುವಳಿಕೆ ಪತ್ರವನ್ನು ನೀಡಿದರು ಸದರಿ ತಿಳುವಳಿಕೆ ಪತ್ರ ಅವರಿಗೆ ಜಾರಿ ಆಗಿರುತ್ತದೆ. ವಾದಿಗೆ ಪ್ರತಿವಾದಿಯು ಹಣವನ್ನು ನೀಡದೇ ಇದ್ದುದ್ದರಿಂದ ವಾದಿಗೆ ನಷ್ಟವಾಗಿರುತ್ತದೆ.

೯. ೧ ನೇ ಪ್ರತಿವಾದಿ ಮತ್ತು ವಾದಿ ಮಧ್ಯೆ ಆದ ಒಪ್ಪಂದ ಕರಾರು ನೊಂದಣಿ ಆಗಿರುವುದಿಲ್ಲ ಆದುದ್ದರಿಂದ ಅದು ವಜಾ ಮಾಡತಕ್ಕದ್ದಾಗಿರುತ್ತದೆ. ವಾದಿಯು ದಾವೆಯಲ್ಲಿ ಬದಲಿ ಪರಿಹಾರವನ್ನು ಕೋರಿದ್ದು ರೂ.೫೯,೦೦,೦೦೦-೦೦ ಗಳನ್ನು ಮರು ಪಾವತಿಸಲು ನ್ಯಾಯಾಲಯದಲ್ಲಿ ಆದೇಶ ಮಾಡಲು ಕೋರಿದ್ದು ಪ್ರತಿವಾದಿಯು ಆ ಹಣವನ್ನು ಪಾವತಿ ಮಾಡಲು ಬದ್ದರಾಗಿರುತ್ತಾರೆ. ವಾದಿಯು

ಮಧ್ಯಂತರ ಅರ್ಜಿಯಲ್ಲಿ ತಡೆಯಾಜ್ಞೆ ಆದೇಶವನ್ನು ಕೋರಿ ೨ ನೇ ಪ್ರತಿವಾದಿಯು ಅವರ ಅನುಯಾಯಿಗಳು ದಾವಾ ಆಸ್ತಿಯನ್ನು ಮಾರಾಟ ಮಾಡಬಾರದೆಂದು ಕೋರಿ ಅರ್ಜಿ ಸಲ್ಲಿಸಿದ್ದು ಸದರಿ ಮದ್ಯಂತರ ಅರ್ಜಿಯಲ್ಲಿ ಪರಿಹಾರವನ್ನು ಕೋರಲು ವಾದಿಯು ಮಾಲೀಕರಾಗಿರುವುದಿಲ್ಲ ಮತ್ತು ಸ್ವಾಧೀನ ಹೊಂದಿರುವುದಿಲ್ಲ. ೨ ನೇ ಪ್ರತಿವಾದಿಯು ಕಾನೂನು ಬದ್ದವಾಗಿ ಸಂಪೂರ್ಣ ಪ್ರತಿಫಲದ ಹಣವನ್ನು ಪಾವತಿ ಮಾಡಿ ಕಾನೂನಿನಡಿ ದಿನಾಂಕ ೧೩-೧-೨೦೨ ರಿಂದು ಒಂದನೇ ಪುಸ್ತಕದ ದಸ್ತಾವೇಜು ನಂಬರಾ ಕೆಡಿಆರ್ ೦೧೦೦೯೬೧೭೯-೨೦೧೯-೨೦ ಆಗಿ ಸಿ.ಡಿ. ನಂಬರ್ ಕೆಡಿಆರ್‌ಡಿ ೪೭೪ ರಲ್ಲಿ ನೊಂದಾಯಿತ ಕ್ರಯಪತ್ರವನ್ನು ಕೈಗಾರಿಕಾ ಉದ್ದೇಶಕ್ಕಾಗಿ ಹೊಂದಿದ್ದು ಕೈಗಾರಿಕಾ ಉದ್ದೇಶಕ್ಕಾಗಿ ಆದೇಶ ನೀಡಿದ್ದು. ದಿನಾಂಕ ೧೩-೦೧-೨೦೨೦ ರಂದು ಕ್ರಯ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ. ಸದರಿ ಕ್ರಯಪತ್ರದಂತೆ ಸ್ವಾಧೀನಾನುಭವ ಹೊಂದಿರುತ್ತಾರೆ. ಸದರಿ ಕ್ರಯಪತ್ರದಂತೆ ೨ ನೇ ಪ್ರತಿವಾದಿ ಹೆಸರಿಗೆ ಕಂದಾಯ ಇಲಾಖೆಯಲ್ಲಿ ಖಾತೆ ದಾಖಲಾಗಿರುತ್ತದೆ. ಸದರಿ ಜಮೀನನ್ನು ಕ್ರಯಕ್ಕೆ ಪಡೆದು ಹಾಲಿ ಲಕ್ಷಾಂತರ ರೂ ಹಣವನ್ನು ಖರ್ಚು ಮಾಡಿ ಕೈಗಾರಿಕೆ ಸ್ಥಾಪಿಸಲು ಅಭಿವೃದ್ಧಿ ಪಡಿಸುತ್ತಿರುತ್ತಾರೆ ಮತ್ತು ಈ ಪ್ರತಿವಾದಿಯ ಆಸ್ತಿಯನ್ನು ಮಾರಾಟ ಮಾಡುವುದಿಲ್ಲ. ವಾದಿಯು ಮಾರಾಟ ಮಾಡಿರುತ್ತಾರೆಂದು ಹೇಳಿರುವುದು ಸುಳ್ಳಿನಿಂದ ಕೂಡಿರುತ್ತದೆ. ಒಂದು ವೇಳೆ ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದಲ್ಲಿ ಈ ಪ್ರತಿವಾದಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ. ಸುಳ್ಳು ಅಂಶಗಳನ್ನು ಹೇಳಿಕೊಂಡು ಆಸ್ತಿಯನ್ನು ಕಬಳಿಸುವ ಸಲುವಾಗಿ ಈ ಅರ್ಜಿ ಸಲ್ಲಿಸಿರುತ್ತಾರೆ ಆದುದರಿಂದ ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

೧೦. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

ನ್ಯಾಯಾಲಯವು ನಿರ್ಧರಿಸಬೇಕಾದ ಅಂಶಗಳು ಈ ಕೆಳಗಿನಂತಿವೆ:

೧) ಸದರಿ ವಾದಿಯರು ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿರುತ್ತಾರೆ ಎಂಬುದನ್ನು ರುಜುವಾತುಪಡಿಸುವರೇ?

೨) ಮಧ್ಯಂತರ ಅರ್ಜಿಯಲ್ಲಿ ಕೋರಿದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದಿದ್ದಲ್ಲಿ ಅನಾನುಕೂಲತೆ ಒಲವು ತಮ್ಮ ಪರವಾಗಿ ಇರುತ್ತದೆ ಎಂಬುದನ್ನು ವಾದಿಯರು ರುಜುವಾತುಪಡಿಸುವರೇ?

೩) ಒಂದು ವೇಳೆ ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶ ನೀಡದೇ ಇದ್ದಲ್ಲಿ ತುಂಬಲಾರದ ನಷ್ಟ ಉಂಟಾಗುವ ಸಂಭವ ಇರುತ್ತದೆ ಎಂಬುದನ್ನು ವಾದಿಯರು ರುಜುವಾತುಪಡಿಸುವರೇ?

೪) ಆದೇಶವೇನು?

೧೧. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

೧೨. ಸದರಿ ನ್ಯಾಯಾಲಯದ ಮುಂದಿರುವ ದಾವಾಂಶಗಳನ್ನು ಹಾಗೂ ದಾಖಲೆಗಳನ್ನು ಹಾಗೂ ಉಭಯ ವಕೀಲರ ವಾದವನ್ನು ಆಲಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರ.

ಅಂಶ ನಂ. ೧ಃ ಸಕಾರಾತ್ಮಕವಾಗಿ

ಅಂಶ ನಂ. ೨ಃ ಸಕಾರಾತ್ಮಕವಾಗಿ

ಅಂಶ ನಂ. ೩ಃ ಸಕಾರಾತ್ಮಕವಾಗಿ

ಅಂಶ ನಂ. ೪ಃ ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿಃ-

## ಕಾ ರ ಣ ಗ ಳು

೧೩. ಅಂಶ ನಂ. ೧ ಃ- ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಯನ್ನು ಕ್ರಯದ ಕರಾರಿನಂತೆ ಕ್ರಯಪತ್ರ ನೊಂದಣಿಮಾಡಿಸಿ ಕೊಡಿಸಬೇಕೆಂದು ಕೋರಿಕೊಂಡಿರುತ್ತಾರೆ. ದಾವಾ ಆಸ್ತಿಗೆ ೧ ನೇ ಪ್ರತಿವಾದಿಯವರು ಮಾಲೀಕರಾಗಿದ್ದರು ಎಂಬ ಬಗ್ಗೆ ಯಾವುದೇ ತಕರಾರು ಇದ್ದಿರುವುದಿಲ್ಲ. ೨ ನೇ

ಪ್ರತಿವಾದಿಯವರು ನ್ಯಾಯಾಲಯಕ್ಕೆ ಹಾಜರಾಗಿ ತಮಗೆ ೧ ನೇ ಪ್ರತಿವಾದಿಯು ಕ್ರಯ ಪತ್ರ ಬರೆದುಕೊಟ್ಟಿದ್ದು ಅದರ ಪ್ರತಿಫಲವನ್ನು ಹಣವನ್ನು ಅವರು ಸಂಪೂರ್ಣವಾಗಿ ಪಾವತಿಸಿದ್ದಾರೆಂದು ಎಂಬ ಖಂಡನೆಯನ್ನು ತೆಗೆದುಕೊಂಡಿದ್ದಾರೆ.

೧೪. ಎಲ್ಲಿಯೂ ಕೂಡ ಒಂದನೇ ಪ್ರತಿವಾದಿಯು ತಾನು ವಾದಿಗೆ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂಬ ಬಗ್ಗೆ ಅಲ್ಲಗಳೆದಿರುವುದಿಲ್ಲ. ೨ ನೇ ಪ್ರತಿವಾದಿ ಪ್ರಕಾರ ವಾದಿಯು ಉಳಿಕೆ ಕ್ರಯದ ಹಣವನ್ನು ನೀಡದೇ ಇರುವುದರಿಂದ ಅವರಿಗೆ ನೋಟಿಸ್‌ನ್ನು ನೀಡಿ ಕರಾರು ಪತ್ರವನ್ನು ಖುಲಾಸೆಪಡಿಸಿಕೊಂಡಿರುತ್ತಾರೆಂದು, ಖಂಡನೆಗೆ ತೆಗೆದುಕೊಂಡಿದ್ದು ವಾದಿಯು ತನ್ನ ವಾದ ಪತ್ರದಲ್ಲಿ ತಾನು ಮುಂಗಡ ೫ ಲಕ್ಷ ಮುಂಗಡ ಹಣವನ್ನು ನೀಡಿದ್ದು ಉಳಿಕೆ ಹಣವನ್ನು ನೀಡಲು ತಯಾರಿದ್ದು ಮತ್ತು ಕ್ರಯ ಪತ್ರವನ್ನು ನೊಂದಣಿ ಮಾಡಿಸಿಕೊಳ್ಳಲು ಎಂದಿಗೂ ಕೂಡ ಬದ್ಧ ಮತ್ತು ಸಿದ್ಧನಾಗಿರುತ್ತಾರೆ ಆದರೆ ಒಂದನೇ ಪ್ರತಿವಾದಿಯು ಉದ್ದೇಶಪೂರ್ವಕವಾಗಿ ಕ್ರಯಪತ್ರವನ್ನು ನೊಂದಣಿ ಮಾಡಿಕೊಡಲು ನಿರಾಕರಿಸಿರುತ್ತಾರೆ ಎಂಬುದಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಪುರಾವೆಗೊಳಿಸಲು ಸಾಕ್ಷ್ಯ ಆಧಾರಗಳ ಅವಶ್ಯಕತೆ ಇರುತ್ತದೆ.

೧೫. ೧೦ ನೇ ಪ್ರತಿವಾದಿಯ ೨ ನೇ ಪ್ರತಿವಾದಿಯವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂಬ ಬಗ್ಗೆ ಯಾವುದೇ ತಕರಾರು ಇದ್ದಿರುವುದಿಲ್ಲ. ೨ ನೇ ಪ್ರತಿವಾದಿಯು ಈ ಅರ್ಜಿಯನ್ನು ಪುರಸ್ಕರಿಸಿದಲ್ಲಿ ಅವರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎಂದು ಘನ ನ್ಯಾಯಾಲಯದಲ್ಲಿ ತಾವು ಆಸ್ತಿಯನ್ನು ಯಾರಿಗೂ ಮಾರಾಟ ಮಾಡುವುದಿಲ್ಲ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ವಾದಿಯು ಕರಾರಿನಂತೆ ಉಳಿಕೆ ಪ್ರತಿಫಲ ಹಣವನ್ನು ನಿಗದಿತ ಸಮಯದಲ್ಲಿ ನೀಡಿರುವುದಿಲ್ಲ ಎಂಬ ತೀರ್ಮಾನಕ್ಕೆ ಬರಲು ಸಾಕ್ಷ್ಯ ಆಧಾರಗಳ ಅವಶ್ಯಕತೆ ಇರುತ್ತದೆ ಅಲ್ಲದೆ ೧ನೇ ಪ್ರತಿವಾದಿಯವರು ಕಾನೂನು ಬದ್ಧವಾಗಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎನ್ನುವ ಬಗ್ಗೆ ತೀರ್ಮಾನಕ್ಕೆ ಬರಲು ಸಾಕ್ಷ್ಯಾದಾರಗಳ ಅವಶ್ಯಕತೆ ಇದ್ದಿರುತ್ತದೆ. ಈಗಿರುವಾಗ ೨ ನೇ ಪ್ರತಿವಾದಿಯವರು ದಾವಾ ಆಸ್ತಿಯನ್ನು

ಇನ್ನೊಬ್ಬರಿಗೆ ಆಸ್ತಿಯನ್ನು ಮಾರಾಟ ಮಾಡಿದಲ್ಲಿ ವಾದಿಗೆ ತೊಂದರೆ ಆಗುವ ಸಾಧ್ಯತೆ ಇರುತ್ತದೆ. ಕಾನೂನುಬದ್ಧವಾಗಿ ದಾವಾಸ್ತಿಯು ಮಾರಾಟವಾಗಿದೆಯೋ ಇಲ್ಲವೋ ಎಂಬುದನ್ನು ಪರಿಗಣಿಸಬೇಕಾದಲ್ಲಿ ಸಾಕ್ಷ್ಯಾಧಾರವನ್ನು ಪರಿಗಣಿಸಬೇಕಾಗುತ್ತದೆ ಒಂದು ವೇಳೆ ದಾವಾ ಆಸ್ತಿಯನ್ನು ಈ ದಾವೆಯ ತೀರ್ಮಾನ ಆಗುವವರೆಗೂ ದಾವಾ ಆಸ್ತಿಯನ್ನು ಮಾರಾಟ ಮಾಡಬಾರದೆಂದು ಆದೇಶ ನೀಡಿದಲ್ಲಿ ಖಂಡಿತವಾಗಿಯು ಪ್ರತಿವಾದಿಯವರಿಗೆ ಯಾವುದೇ ರೀತಿಯಾದಂತಹ ತೊಂದರೆ ಆಗುವ ಸಾದ್ಯತೆ ಇರುವುದಿಲ್ಲ. ಆದ್ದರಿಂದ ೧ ನೇ ಪ್ರತಿವಾದಿಯವರು ಕರಾರು ಪತ್ರವನ್ನು ಅಲ್ಲಗಳೆದಿರುವುದಿಲ್ಲ ಆದ್ದರಿಂದ ಮೇಲೆ ಹೇಳಿದ ಕಾರಣಗಳಿಂದ ವಾದಿಯರು ಈ ಹಂತದಲ್ಲಿ ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿರುತ್ತಾರೆಂದು ವಾದಿಯು ಪುರಾವೆಗೊಳಿಸಿರುತ್ತಾರೆ, ಆದ್ದರಿಂದ ಅಂಶ ನಂ.೧ ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

೧೬. ಅಂಶ ನಂ. ೨ ಮತ್ತು ೩: ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿದ್ದರಿಂದ ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ದಾವೆಯು ವಿವಾದದಲ್ಲಿರುವಾಗ ಯಾವುದೇ ಸ್ವತ್ತು ದಾವೆಯ ಯಾವುದೇ ಪಕ್ಷಗಾರರಿಂದ ಹಾನಿಗೊಳಗಾಗುವ ಅಥವಾ ಪರಭಾರೆ ಮಾಡುವ ಅಥವಾ ವಾದಿಯ ಸ್ವಾಧೀನದಿಂದ ತಪ್ಪಿಸುವುದಕ್ಕಾಗಿ ಪ್ರಯತ್ನ ಮಾಡುತ್ತಿದ್ದಲ್ಲಿ ಮುಂದಿನ ಆದೇಶವಾಗುವವರೆಗೆ ಅಂತಹ ಕೃತ್ಯವನ್ನು ನಿಗ್ರಹಿಸುವ ಮೂಲಕ ನ್ಯಾಯಾಲಯವು ಆದೇಶದ ಮೂಲಕ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿದೆ. ದಾವಾ ಸ್ವತ್ತಿನ ಬಗ್ಗೆ ವಾದಿಸುತ್ತಿರುವ ಪಕ್ಷಗಾರರು ತಮ್ಮ ಹಕ್ಕುಗಳನ್ನು ನಿರ್ಣಯಿಸುವರೆಗೆ ದಾವಾ ಸ್ವತ್ತಿನ ಸ್ಥಿತಿಗತಿಗಳನ್ನು ಅಲ್ಲಿ ದಾವೆ ಹೂಡುವಾಗ ಇದ್ದ ಸ್ಥಿತಿಯಲ್ಲಿ ಇರಿಸಿಕೊಂಡು ಹೋಗಬೇಕೆಂದು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಮಾಡಬೇಕೆಂದು ಇರುವ ಇನ್ನೊಂದು ಮಹತ್ವದ ಉದ್ದೇಶವಾಗಿರುತ್ತದೆ.

೧೭. ವಾದಿಯರು ಈ ದಾವೆಯಲ್ಲಿ ಮಧ್ಯಂತರ ಅರ್ಜಿ ೧ ನ್ನು ಸಲ್ಲಿಸಿ ಪ್ರತಿವಾದಿ ೧ ಮತ್ತು ೨ ರವರು ದಾವಾ ಆಸ್ತಿಯನ್ನು ಯಾರಿಗೂ ಮಾರಾಟ ಮಾಡಬಾರದೆಂದು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಗೆ ೧ ನೇ ಪ್ರತಿವಾದಿಯವರು ಕರಾರು ಪತ್ರವನ್ನು ಬರೆದುಕೊಟ್ಟಿರುವ ಬಗ್ಗೆ ಎಲ್ಲಿಯೂ ಅಲ್ಲಗಳೆದಿರುವುದಿಲ್ಲ ಹಾಗೂ ಮುಂಗಡ ಹಣ ೫೯ ಲಕ್ಷ ಪಡೆದಿರುವ ಬಗ್ಗೆ ಅಲ್ಲಗಳೆದಿರುವುದಿಲ್ಲ ಆದರೆ ೧ ನೇ ಪ್ರತಿವಾದಿ ಪ್ರಕಾರ ವಾದಿಯು ಉಳಿಕೆ ಹಣವನ್ನು ನೀಡಿರುವುದಿಲ್ಲ ಮತ್ತು ಕರಾರಿನ ಷರತ್ತನು ಪಾಲಿಸಿರುವುದಿಲ್ಲ ಎಂಬುದಾಗಿರುತ್ತದೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸದೆ ಇದ್ದಲ್ಲಿ ಪ್ರತಿವಾದಿಯರು ಆಸ್ತಿಯನ್ನು ಮಾರಾಟ ಮಾಡಿದ್ದಲ್ಲಿ ವಾದಿಯರಿಗೆ ಖಂಡಿತವಾಗಿ ತೊಂದರೆ ಉಂಟಾಗುತ್ತದೆ. ವಾದಿಯರು ಕೇವಲ ಈ ದಾವೆಯು ಮುಗಿಯುವರೆಗೆ ಪ್ರತಿವಾದಿಯರು ದಾವಾ ಆಸ್ತಿಯನ್ನು ಯಾರಿಗೂ ಯಾವುದೇ ರೀತಿಯಿಂದ ಪರಭಾರೆ ಮಾಡದಂತೆ ಈ ದಾವೆಯ ಅಂತಿಮ ಆದೇಶ ಅಗುವವರೆಗೂ ಪ್ರತಿವಾದಿಯರಿಗೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುವುದು ಕಂಡು ಬಂದಿದ್ದು, ಒಂದು ವೇಳೆ ದಾವೆ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಯನ್ನು ಪ್ರತಿವಾದಿಯರು ಮಾರಾಟ ಮಾಡಿ ಋಣಭಾರ ಹೊರಿಸಿದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ, ಪರಭಾರೆ ಮಾಡುವುದು ಮಾಡಿದರೆ ಖಂಡಿತವಾಗಿಯೂ ಅನಾನುಕೂಲತೆಯ ಒಲವು ವಾದಿಯರ ಪರವಾಗಿರುತ್ತದೆ ಆದರೆ ಈ ದಾವೆಯಲ್ಲಿ ಅಂತಿಮ ತೀರ್ಪು ಆಗುವವರೆಗೂ ಬೇರೆ ಯಾರಿಗೂ ಮಾರಾಟ ಮಾಡಬಾರದು ಹಾಗೂ ಋಣಭಾರ ಹೊರಿಸಬಾರದು ಎಂದು ಆದೇಶ ಮಾಡಿದಲ್ಲಿ ಪ್ರತಿವಾದಿಗೆ ಯಾವುದೇ ರೀತಿಯಾದಂತಹ ತೊಂದರೆ ಉಂಟಾಗುವುದಿಲ್ಲ ಆದ್ದರಿಂದ ಮೇಲೆ ಹೇಳಿದ ಕಾರಣಗಳಿಂದ ಅಂಶ ೨ ಮತ್ತು ೩ ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

೧೮. <u>ಅಂಶ ನಂ. ೪</u>:- ೧ ರಿಂದ ೩ನೇ ಅಂಶಗಳಲ್ಲಿ ತಿಳಿಸಿರುವ ಕಾರಣಗಳಿಂದ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

:: ಆದೇಶ ::

ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ೩೯ ನಿಯಮ ೧ ಮತ್ತು ೨ ಅಡಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ.೧ ನ್ನು ಪುರಸ್ಕರಿಸಲಾಗಿದೆ.

೨ ನೇ ಪ್ರತಿವಾದಿಯವರಾಗಲೀ ಅವರ ವಾರಸುದಾರರು, ಪ್ರತಿನಿಧಿಯವರು, ಸೇವಕರು ಹಾಗೂ ಅವರ ಪರವಾಗಿ ಕೆಲಸ ಮಾಡುವ ಯಾವುದೇ ವ್ಯಕ್ತಿಗಳು ದಾವಾ ಶೆಡ್ಯೂಲ್ ಆಸ್ತಿಯನ್ನು ಯಾರಿಗೂ ಯಾವುದೇ ರೀತಿಯಿಂದ ಪರಭಾರೆ ಮಾಡಬಾರದೆಂದು ಹಾಗೂ ಯಾವುದೇ ಋಣಭಾರ ಹೊರಿಸಬಾರದು ಎಂದು ಈ ದಾವೆಯ ಅಂತಿಮ ಆದೇಶ ಅಗುವವರೆಗೂ ಪ್ರತಿವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಆದೇಶವನ್ನು ಗಣಕ ಯಂತ್ರದಲ್ಲಿ ನೇರವಾಗಿ ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ೦೮-೦೯.೨೦೨೧ರಂದು ಉದ್ಘೋಷಿಸಲಾಯಿತು)

(ಶ್ರೀಮತಿ ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಕಡೂರು.

(ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಪ್ರಕಟಿಸಲಾಯಿತು)

:: **ಆದೇಶ** ::

ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **೩೯** ನಿಯಮ ೧ ಮತ್ತು ೨ ಅಡಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ.೧ ನ್ನು ಪುರಸ್ಕರಿಸಲಾಗಿದೆ.

೨ ನೇ ಪ್ರತಿವಾದಿಯವರಾಗಲೀ ಅವರ ವಾರಸುದಾರರು, ಪ್ರತಿನಿಧಿಯವರು, ಸೇವಕರು ಹಾಗೂ ಅವರ ಪರವಾಗಿ ಕೆಲಸ ಮಾಡುವ ಯಾವುದೇ ವ್ಯಕ್ತಿಗಳು ದಾವಾ ಶೆಡ್ಯೂಲ್ ಆಸ್ತಿಯನ್ನು ಯಾರಿಗೂ ಯಾವುದೇ ರೀತಿಯಿಂದ ಪರಭಾರೆ ಮಾಡಬಾರದೆಂದು ಹಾಗೂ ಯಾವುದೇ ಋಣಭಾರ ಹೊರಿಸಬಾರದು ಎಂದು ಈ ದಾವೆಯ ಅಂತಿಮ ಆದೇಶ ಅಗುವವರೆಗೂ ಪ್ರತಿವಾದಿಯರಿಗೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಕಡೂರು.